**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು,**

ಸಂಖ್ಯೆ: ಜೆಡಿಎಂ/07/2016–17 ದಿನಾಂಕ: 04–05–2017.
10.05.2017

**ಇವರಿಗೆ,**
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು**
**-------------------ಜಿಲ್ಲೆ.**

**ವಿಷಯ : ರಾಜ್ಯದ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಫಲಾನುಭವಿಗಳ ಸಂಪೂರ್ಣ ಮಾಹಿತಿಯನ್ನು Samsung Tablet ಗಳಲ್ಲಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು ಅನುಸರಿಸಬೇಕಾದ ಮಾರ್ಗ ಸೂಚಿಗಳು.**

ರಾಜ್ಯದ **24x7** ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಫಲಾನುಭವಿಗಳ ಸಂಪೂರ್ಣ ಮಾಹಿತಿಯನ್ನು Samsung Tablet ಗಳಲ್ಲಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು ಸ್ಯಾಮ್‌ಸಂಗ್ ಕಂಪನಿ ವತಿಯಿಂದ ಟ್ಯಾಬ್ಲೆಟ್‌ಗಳನ್ನು ಉಚಿತವಾಗಿ ನೀಡಲಾಗಿದೆ.

1. ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲಾಗುವ Inofrmation Communication Technology - ICT ಕಾರ್ಯಕ್ರಮಗಳಾದ e- hospital, PHC-MIS, Telemedicine ಇತ್ಯರ್ಥಿಗಳಿಗೆ ಜಿಲ್ಲಾ ನೋಡಲ್ ಅಧಿಕಾರಿಯಾಗಿ, ಆಯಾ ಜಿಲ್ಲೆಯ ಜಿಲ್ಲಾ ಕುಷ್ಠರೋಗ ನಿವಾರಣ ಅಧಿಕಾರಿಗಳನ್ನು ನೇಮಿಸಿ, ಐ.ಸಿ.ಟಿ ಕಾರ್ಯಕ್ರಮಗಳನ್ನು ಮೇಲ್ವಿಚಾರಣೆ ಮತ್ತು ವರದಿ ಮಾಡಲು ಸೂಚಿಸಿದೆ.

2. PHC-MIS ಸಾಫ್ಟವೇರ್‌ನಲ್ಲಿ ಫಲಾನುಭವಿಗಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುವ/ಬಗ್ಗೆ ಆ ಜಿಲ್ಲೆಯಲ್ಲೇ ಆಯೋಜಿಸುವುದು. ಈ ತರಬೇತಿ ಕಾರ್ಯಕ್ರಮದ ಅನುದಾನವನ್ನು ಎನ್.ಹೆಚ್,ಎಂ.ನ Programme management ಅಡಿಯಲ್ಲಿ ಭರಿಸಲು ಒದಗಿಸಬಹುದಾಗಿದೆ.

3. **24x7** ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಯವರು PHC-MIS ನಿರ್ವಹಣೆಯನ್ನು ಅವರ ಹಂತದಲ್ಲೇ ನಿರ್ಧಾರ ಕೈಗೊಳ್ಳುವುದು.

4. Samsung Tablet ಗಳಿಗೆ ಅಳವಡಿಸಿರುವ ಸಿಮ್‌ಕಾರ್ಡ್‌ಗಳ ರೀಚಾರ್ಜ್‌ನ್ನು ಎನ್.ಹೆಚ್,ಎಂ.ನ Programme management ಅಡಿಯಲ್ಲಿ ಭರಿಸಲು ಸೂಚಿಸಲಾಗಿದೆ.

ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರಿಂದ ಸಾರ್ವಜನಿಕರ ಆರೋಗ್ಯ ಮಾಹಿತಿಯ ಗಣಕೀಕರಣದಿಂದ ಆರೋಗ್ಯ ಇಲಾಖೆ ಅಡಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಾದ ಜನನಿ ಸುರಕ್ಷಾ ಯೋಜನೆ, ಮಡಿಲು (ಬಾಣಂತಿಯರಿಗೆ ನೀಡುವ ಕಿಟ್) ಮುಂತಾದ ಎಲ್ಲಾ ಆರೋಗ್ಯ ಯೋಜನೆಗಳ ಬಗ್ಗೆ ಮಾಹಿತಿ ದೊರಕಲಿದ್ದು, ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಹಾಗೂ ಸಮರ್ಪಕವಾಗಿ ನೀಡಲು ಅನುಕೂಲವಾಗಲಿದೆ.

10/5/17
ಉಪ ನಿರ್ದೇಶಕರು (ವೈದ್ಯಕೀಯ–2)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದರಾವ್ ವೃತ್ತ, ಬೆಂಗಳೂರು

**ಪ್ರತಿಯನ್ನು ಕ್ರಮವಹಿಸಲು :-**

1. ಎಲ್ಲಾ ಜಿಲ್ಲಾ ಕುಷ್ಠರೋಗ ನಿವಾರಣ ಅಧಿಕಾರಿಗಳು, .________________ಜಿಲ್ಲೆ.
2. ಎಲ್ಲಾ **24x7** ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು,

**ಪ್ರತಿಯನ್ನು ಮಾಹಿತಿಗಾಗಿ :-**

1. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್ ರಾವ್ ವೃತ್ತ, ಬೆಂಗಳೂರು
2. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್ ರಾವ್ ವೃತ್ತ, ಬೆಂಗಳೂರು
4. ಮುಖ್ಯ ಹಣಕಾಸು ಅಧಿಕಾರಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
5. ಜಂಟಿ ನಿರ್ದೇಶಕರು(ವೈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದ್ ರಾವ್ ವೃತ್ತ, ಬೆಂಗಳೂರು

10/5/17

ಉಪ ನಿರ್ದೇಶಕರು (ವೈದ್ಯಕೀಯ-2)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದರಾವ್ ವೃತ್ತ, ಬೆಂಗಳೂರು